**<u>ಅಸಲು ದಾವಾ ಸಂಖ್ಯೆಃ -05/2023</u>** **ಪಿ.ಡಬ್ಲ್ಯೂ:-1**

ದಿನಾಂಕಃ **27.03.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ಪ್ರತಿವಾದಿಗಳು ನನಗೆ ಸಂಬಂಧಿಕರಾಗಬೇಕು. ಪ್ರತಿವಾದಿಗಳು ನನಗೆ ಸಂಬಂಧಿಕರಾಗಬೇಕು ಎಂಬ ವಿಚಾರವನ್ನು ವಾದ ಪತ್ರದಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಾಗಲೀ ನಮೂದು ಮಾಡಿಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ನಿಪಿ-1 ರ ಕ್ರಯ ಪತ್ರದಂತೆ ಯಲ್ಲಮ್ಮರವರು ಖರೀದಿ ಮಾಡಿದ್ದಾರೆ. ಯಲ್ಲಮ್ಮರವರು ನನಗೆ ಅಜ್ಜಿಯಾಗಬೇಕು ಅಂದರೆ ನನ್ನ ತಂದೆಯ ತಾಯಿ. ನಮ್ಮ ಅಜ್ಜಿ ಯಲ್ಲಮ್ಮರವರಿಗೆ 3 ಜನ ಮಕ್ಕಳು ಅಂದರೆ ಕರಿಯಪ್ಪ, ಬೀರಪ್ಪ ಮತ್ತು ಹಾಲಮ್ಮ. ಕರಿಯಪ್ಪನ ಹೆಂಡತಿ ಗಂಗಮ್ಮ ನನ್ನ ತಾಯಿ. ನಾವು ಒಟ್ಟು 3 ಜನ ಅಣ್ಣತಮ್ಮಂದಿರು ಅಂದರೆ ಬಸಪ್ಪ, ನಾಗರಾಜಪ್ಪ ಮತ್ತು ಅಂಜಿನಪ್ಪ. ಬಸಪ್ಪ ಮತ್ತು ನಾಗರಾಜಪ್ಪ ಈ ದಾವೆಯನ್ನು ಸಲ್ಲಿಸಲು ನನಗೆ ಯಾವುದೇ ಮುಖ್ತಾರನಾಮೆಯನ್ನು ಬರೆದುಕೊಟ್ಟಿರುವುದಿಲ್ಲ. ಆದರೆ ಮೌಖಿಕವಾಗಿ ದಾವೆಯನ್ನು ಸಲ್ಲಿಸಲು ಒಪ್ಪಿಗೆಯನ್ನು ಕೊಟ್ಟಿರುತ್ತಾರೆ. ಯಲ್ಲಮ್ಮನ 2 ನೇ ಮಗ ಬೀರಪ್ಪ. ಬೀರಪ್ಪನ ಹೆಂಡತಿ ಪಾರ್ವತಮ್ಮ. ಬೀರಪ್ಪರವರಿಗೆ 4 ಜನ ಮಕ್ಕಳು ಅಂದರೆ ರಾಮಚಂದ್ರಪ್ಪ, ಹಾಲೇಶ, ಕರಿಯಮ್ಮ ಮತ್ತು ರೇಣುಕಮ್ಮ. 1 ನೇ ಪ್ರತಿವಾದಿ ನನಗೆ ಚಿಕ್ಕಮ್ಮರಾಗಬೇಕು. ದಾವಾ ಆಸ್ತಿಯ ಖಾತೆ ಈಗಲೂ ಯಲ್ಲಮ್ಮರವರ ಹೆಸರಿನಲ್ಲಿದೆ ಎಂದರೆ ಸರಿ. ಯಲ್ಲಮ್ಮನ 2 ನೇ ಮಗನಾದ ಬೀರಪ್ಪನ ವಾರಸುದಾರರು ಈ ದಾವೆಯನ್ನು ಸಲ್ಲಿಸಲು ಮುಖ್ತಾರನಾಮೆಯನ್ನು ಬರೆದುಕೊಟ್ಟಿರುವುದಿಲ್ಲ. ಹಾಲಮ್ಮರವರು ಈಗ್ಗೆ 12-13 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಯಲ್ಲಮ್ಮ ಖರೀದಿ ಮಾಡಿದ ಆಸ್ತಿಯ ಖಾತೆ ಅವರ ಮಕ್ಕಳ

ಹೆಸರಿಗಾಗಲೀ ಅಥವಾ ಅವರ ಮೊಮ್ಮಕ್ಕಳ ಹೆಸರಿಗಾಗಲೀ ಖಾತೆ ಆಗಿರುವುದಿಲ್ಲ. ಗ್ರಾಮ ಪಂಚಾಯಿತಿಗೆ ದಾವಾ ಆಸ್ತಿಯ ಖಾತೆಯನ್ನು ನಮ್ಮ ಹೆಸರಿಗೆ ಮಾಡುವಂತೆ ಅರ್ಜಿಯನ್ನು ಸಲ್ಲಿಸಿದ್ದೆನು. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಮತ್ತು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಖಾತೆ ಈಗ ಯಾರ ಹೆಸರಿಗೆ ಬದಲಾವಣೆ ಆಗಿದೆ ಎಂಬ ವಿಚಾರ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.